<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>
<u>ಘನ ನ್ಯಾಯಾಲಯದಲ್ಲಿ</u>
<u>ಪ್ರಕರಣ ಸಂಖ್ಯೆಃ ಎಸ್.ಸಿ.98/2018</u>

ದಿನಾಂಕಃ 02.08.2021
(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.)

ಪ್ರಾ.ಸಾಃ 5 (ಚಾ.ಸಾ.4 )

| | | |
|---|---|---|
| ಹೆಸರು | ಃ | ಚಿಕ್ಕೇಗೌಡ |
| ತಂದೆಯ ಹೆಸರು | ಃ | ಡಿ.ವಿ.ರಾಮಣ್ಣ |
| ವಯಸ್ಸು | ಃ | ವರ್ಷ 60 |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ದಂಡೇನಹಳ್ಳಿ |

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ನನಗೆ ಪಿರ್ಯಾದಿ, ಅವರ ಕುಟುಂಬದವರು ಹಾಗೂ ಆರೋಪಿಗಳು ಗೊತ್ತು. 5-6 ವರ್ಷಗಳ ಹಿಂದೆ ಪೊಲೀಸರು ನಮ್ಮ ಮನೆಯ ಬಳಿ ಬಂದು ಸಾಕ್ಷಿಯಾಗಿ ನನ್ನ ಸಹಿ ಪಡೆದರು. ಸ್ಥಳ ಮಹಜರ್ ಆದ ನಿ.ಪಿ.2 ರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ನನ್ನ ಸಹಿ ಪಡೆದುಕೊಂಡ ಸಮಯದಲ್ಲಿ ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ತೆಗೆದುಕೊಂಡಿರುವುದಿಲ್ಲ.

2. ಪೊಲೀಸರು ಬೇರೆ ಯಾವುದೇ ಸ್ಥಳಕ್ಕೆ ನನ್ನನ್ನು ಕರೆದಿರಲಿಲ್ಲ. ನಿ.ಪಿ. 3 ಅಮಾನತ್ತು ಮಹಜರ್‌ಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.3(ಬಿ) ಎಂದು ಗುರುತಿಸಲಾಯಿತು. ಪಿರ್ಯಾದಿ ಹಾಗೂ ಆರೋಪಿಗಳ ನಡುವೆ ಗಲಾಟೆಯಾದ ವಿಚಾರದಲ್ಲಿ ಪೊಲೀಸರು ನನ್ನ ಸದರಿ ಸಹಿಯನ್ನು ಪಡೆದಿರುತ್ತಾರೆ.

**(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆಕೆಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ**

**ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ**

3. ದಿಃ14.11.2014 ರಂದುಸಂಜೆ 4-5 ಗಂಟೆ ಸಮಯದಲ್ಲಿ ಪೊಲೀಸರು ನಮ್ಮ ಗ್ರಾಮದ ಅಶ್ವಥ್ಥ ಕಟ್ಟೆಯ ಬಳಿ ಬಂದು ಗೀತಾ ತೋರಿಸಿದ ಅಲ್ಲಿ ಗಲಾಟೆಯಾಗಿದ್ದ ಸ್ಥಳದಲ್ಲಿ ಮಹಜರ್ ಮಾಡಿ 2 ಕಬ್ಬಿಣದ ರಾಡು ಹಾಗೂ ಮರದ ದೊಣ್ಣೆಯನ್ನು ಕೃತ್ಯಕ್ಕೆ ಉಪಯೋಗಿಸಿದ್ದನ್ನು ಹಾಗೂ ಸ್ಥಳದಲ್ಲಿದ್ದ ರಕ್ತದ ಕಲೆಯಾಗಿದ್ದ ಮಣ್ಣು ಹಾಗೂ ಮಾದರಿ ಮಣ್ಣನ್ನು ಅಮಾನತ್ತು ಪಡಿಸಿಕೊಂಡು ನಿ.ಪಿ.2 ಮಹಜರ್ ಬರೆದು ಓದಿ ಹೇಳಿ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ.

4. ದಿಃ19.11.2014 ರಂದು ರಾಜಣ್ಣ ನನ್ನನ್ನು ಕುದೂರು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಘಟನೆಯ ಸಮಯದಲ್ಲಿ ತಾನು ಮತ್ತು ತನ್ನ ಮಗ ಧರಿಸಿದ್ದ ರಕ್ತದ ಕಲೆಯಾಗಿದ್ದ 2 ಶರ್ಟ್‌ಗಳು ಹಾಗೂ ಒಂದು ಬನಿಯನ್ ನ್ನು ರಾಜಣ್ಣ ಹಾಜರು ಪಡಿಸಿದ್ದನ್ನು ಪೊಲೀಸರು ನನ್ನ ಸಮಕ್ಷಮ ನಿ.ಪಿ.3 ರೀತಿಯ ಮಹಜರ್ ಮಾಡಿ ಬರೆದು ಓದಿ ಹೇಳಿ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ.

5. ಮೇಲ್ಕಂಡ 2 ಮಹಜರ್‌ಗಳ ವಿಚಾರಗಳು ನನಗೆ ಗೊತ್ತಿದ್ದರೂ ಸಹ ನಾನು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**